# ಸಂಚಲನ

ಸೆಲ್ಕೋ ಮಾಸಪತ್ರಿಕೆ

ಸಂಪುಟ: 02
ಸಂಚಿಕೆ: 09
ಮೇ 2021





## ಮುಖಪುಟ

ಮಲೆಮಹದೇಶ್ವರ ಬೆಟ್ಟದಲ್ಲಿ ವಾಸಿಸುವ ಶಿವಮ್ಮ ಕುಟುಂಬದ ಆಧಾರ ಸೆಲ್ಕೋದ ಸೌರಶಕ್ತಿ ಆಧರಿತ ಹಿಟ್ಟಿನ ಗಿರಣಿ. ಈ ಗಿರಣಿಯಿಂದಲೇ ಅವರು ಆದಾಯ ಗಳಿಸಿ ಕುಟುಂಬದ ಪಾಲನೆ, ಪೋಷಣೆ ಮಾಡುತ್ತಾರೆ.

# ಪರಿವಿಡಿ


4 ಲಿಂಗ ಅಸಮಾನತೆ ತೊಡೆದ ಸೆಲ್ಕೋ ಸೌರ ಶಕ್ತಿ ಆಧರಿತ ಕುಲುಮೆ

6 ಸೆಲ್ಕೋ ಯಾಕೆ ವಿಭಿನ್ನ? – ಅತ್ಯುತ್ತಮ ಗ್ರಾಹಕ ಸೇವೆಯೇ ಸೆಲ್ಕೋ ಶಕ್ತಿ

8 20 ದಿನದಲ್ಲಿ ಸೌರ ಶಕ್ತಿ ಆಧರಿತ ಕೋವಿಡ್ ಆಸ್ಪತ್ರೆ ನಿರ್ಮಾಣ

10 ಹೈನುಗಾರಿಕೆ ಸುಲಭವಾಯಿತು, ಕಷ್ಟ ದೂರವಾಯಿತು ಹೊಸಕೊಪ್ಪದ ರೈತ ಮಹಿಳೆ ಜಾನಕಮ್ಮನ ಸ್ಫೂರ್ತಿ ಕತೆ

11 ವಿದ್ಯಾರ್ಥಿನಿಯರಿಗೆ ಸೌರಶಕ್ತಿಯೇ ದಾರಿ ದೀಪ

12 ಕೋವಿಡ್ ಸಂದರ್ಭದ ಜೀವನ ಪ್ರೀತಿ ಕತೆಗಳು: ಸೌರಶಕ್ತಿಯಿಂದ ಸ್ಫೂರ್ತಿದಾಯಕ ಜೀವನ ಕಟ್ಟಿಕೊಂಡವರು

14 ಪಾರಂಪರಿಕ ಕೌಶಲವನ್ನು ಮುಂದಿನ ಪೀಳಿಗೆಗೆ ದಾಟಿಸಿದ ಸೌರಶಕ್ತಿ

15 ಅನುಭವ ಕಥನ
ಸೆಲ್ಕೋ ಅಂದ್ರೆ ನನಗೆ ಆಶೀರ್ವಾದ




# ಸಂಪಾದಕೀಯ

ಕೋವಿಡ್–19 ಎರಡನೇ ಅಲೆ ಮಾನವ ಸಂಕುಲ ಎರಡನೇ ವಿಶ್ವಯುದ್ಧದ ನಂತರ ಎದುರಿಸಿದ ಅತಿ ದೊಡ್ಡ ಸವಾಲು. ನಮ್ಮ ಕಾಲದ ಅತಿ ದೊಡ್ಡ ಜಾಗತಿಕ ಆರೋಗ್ಯ ಬಿಕ್ಕಟ್ಟು ಸೃಷ್ಟಿಯಾದ ಸಂದರ್ಭ. ಕಳೆದ ವರ್ಷ ಏಷ್ಯಾದಲ್ಲಿ ಆರಂಭವಾದ ಈ ಸಂಕಷ್ಟ ನಿಧಾನಕ್ಕೆ ಪ್ರತೀ ಖಂಡಕ್ಕೂ ವ್ಯಾಪಿಸಿತು.

ಸಾಂಕ್ರಾಮಿಕ ಸೋಂಕು ಅಲೆಯ ರೀತಿ ಹಬ್ಬುತ್ತಲೇ ಇದೆ. ಶಿಕ್ಷಣ ಸಂಸ್ಥೆಗಳು ಮುಚ್ಚಿಕೊಂಡಿವೆ. ಕೋವಿಡ್– 19ರಿಂದ ಸೃಷ್ಟಿಯಾದ ಸಾಮಾಜಿಕ, ಆರ್ಥಿಕ, ರಾಜಕೀಯ ಬಿಕ್ಕಟ್ಟುಗಳು ತೀವ್ರವಾದ ಗಾಯದ ಗುರುತುಗಳನ್ನು ಉಳಿಸಿದೆ. ಪ್ರತೀದಿನ ಜನ ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಆದಾಯ ಇಲ್ಲವಾಗಿದೆ. ಮತ್ತೆ ಜನಜೀವನ ಸಹಜಸ್ಥಿತಿಗೆ ಮರಳುವುದನ್ನು ಕಲ್ಪಿಸುವುದೇ ಕಷ್ಟವಾಗಿದೆ. ಅಸಮಾನತೆ ಹೆಚ್ಚಾಗಿದೆ. ಲಕ್ಷಗಟ್ಟಲೆ ಮಹಿಳೆಯರು ಕೆಲಸ ಕಳೆದುಕೊಳ್ಳುವ ಅಪಾಯದಲ್ಲಿದ್ದಾರೆ. ಕುಟುಂಬ ಉದ್ಧರಿಸುವ, ಆರೋಗ್ಯ ಕಾಪಾಡಿಕೊಳ್ಳುವುದರಲ್ಲಿ ಸೋಲುವಂತಹ ಪರಿಸ್ಥಿತಿ ಎದುರಾಗಿದೆ. ಸುಲಭವಾಗಿ ಒಡೆದು ಹೋಗದಂತೆ, ಅಸಮಾನತೆ ಕಾಪಾಡಲು ದೇಶಗಳು ಶ್ರಮಿಸಬೇಕು. ಸಾಮಾಜಿಕ ರಕ್ಷಣೆಯ ಲೋಪಗಳಿಗೆ ಪರಿಹಾರ ಕಂಡುಹಿಡಿಯಬೇಕು.

ಸರಕಾರದ ಸಮಸ್ಯೆ ಪರಿಹಾರ ಸಮಿತಿ ದೇಶದ ಜಿಡಿಪಿಯ ಶೇ.10ರಷ್ಟು ಅಂದ್ರೆ 20 ಟ್ರಿಲಿಯನ್‌ರಷ್ಟನ್ನು ನೀಡಿ ಆದಷ್ಟು ಹಾನಿ ತಗ್ಗಿಸುವ ಪ್ರಯತ್ನ ಮಾಡಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮತ್ತು ಸಬ್ಸಿಡಿ ಇರುವ ಆಹಾರ ಧಾನ್ಯಗಳ ಪೂರೈಕೆ ಎರಡೂ ಉಪಯುಕ್ತ ಕಾರ್ಯಕ್ರಮಗಳಾಗಿ ಮೂಡಿ ಬಂದಿವೆ. ನಿರುದ್ಯೋಗ ಸಮಸ್ಯೆ ಪರಿಹರಿಸುವ ಹಿನ್ನೆಲೆಯಲ್ಲಿ ಸಾಮಾಜಿಕ ಸುಭದ್ರತೆ ಸಾಧಿಸಲು ಈ ಯೋಜನೆಗಳು ನೆರವಾಗಿವೆ.

ಒಟ್ಟಾರೆ ನಾವು ಹೊಸ ಜಗತ್ತನ್ನು ನೋಡುತ್ತಿದ್ದೇವೆ, ಅನುಭವಿಸುತ್ತಿದ್ದೇವೆ. ಅಭ್ಯಾಸ ಮತ್ತು ಮನಸ್ಥಿತಿಗಳು ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ಬದಲಾಗಿದ್ದರಿಂದ ಆರ್ಥಿಕತೆಗೆ ಭಾರಿ ಪೆಟ್ಟು ಬಿದ್ದಿದೆ. ಅನೇಕರು ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಆದರೆ ಕೆಲವು ಸನ್ನಿವೇಶಗಳಲ್ಲಿ ಫಲಿತಾಂಶ ಸಕರಾತ್ಮಕವಾಗಿರುವುದು ಒಳ್ಳೆಯ ಬೆಳವಣಿಗೆ. ಹೊಂದಿಕೊಳ್ಳುವಿಕೆ ಮತ್ತು ಕ್ರಿಯಾಶೀಲ ನಿರ್ಧಾರ ತೆಗೆದುಕೊಳ್ಳುವುದರಿಂದ ಉದ್ಯಮಗಳು ಸುಸ್ಥಿರತೆ ಸಾಧಿಸಬಹುದು ಅನ್ನುವುದನ್ನು ಮನಗಾಣಬೇಕಿದೆ. ಸೆಲ್ಕೋ ಸಂಸ್ಥೆಯು ಬಿಕ್ಕಟ್ಟು ಪರಿಹರಿಸಲು ದಿನನಿತ್ಯ ಶ್ರಮಿಸುತ್ತಿದೆ. ಹೊಸ ಆವಿಷ್ಕಾರ ಮತ್ತು ಸುಸ್ಥಿರ ತಾಂತ್ರಿಕ ಸಂಶೋಧನೆಗಳ ಮೂಲಕ ಗುರಿಯನ್ನು ತಲುಪುವ ಪ್ರಯತ್ನ ಮುಂದುವರಿದಿದೆ.

ಸಂಚಲನದ ಈ ಸಂಚಿಕೆಯಲ್ಲಿ ಕೋವಿಡ್–19 ಎರಡನೇ ಅಲೆಯಲ್ಲಿ ತಳಮಟ್ಟದಲ್ಲಿ ಆದ ಬದಲಾವಣೆಯ ಯಶೋಗಾಥೆಗಳನ್ನು ನೀಡುತ್ತಿದ್ದೇವೆ. ಈ ಬರಹಗಳು ಸಂಕಷ್ಟದ ಸಮಯದಲ್ಲಿ ಸೆಲ್ಕೋ ಸಂಸ್ಥೆ ದೇಶ ಕಟ್ಟುವ ಕಡೆಗೆ ತೋರಿಸಿದ ಬದ್ಧತೆಯನ್ನು ಸಾರುತ್ತವೆ. ಓದುಗರು ಈ ಬರಹಗಳನ್ನು ಓದಿ ಖುಷಿ ಪಡುತ್ತಾರೆ ಎಂದು ನಾವು ನಂಬಿದ್ದೇವೆ.

**ಕಮ್ಯುನಿಕೇಷನ್ ಟೀಮ್, ಸೆಲ್ಕೋ**



# ಲಿಂಗ ಅಸಮಾನತೆ ತೊಡೆದ ಸೆಲ್ಕೋ ಸೌರ ಶಕ್ತಿ ಆಧರಿತ ಕುಲುಮೆ

## ಕಮ್ಮಾರಿಕೆ ಆರಿಸಿಕೊಂಡ ತಿರುಪ್ಪಾಚೆಟ್ಟಿಯ ಮೊದಲ ಮಹಿಳೆ ಪಂಚವರ್ಣಂ

ಕಮ್ಮಾರಿಕೆ ಪುರಾತನ ವೃತ್ತಿಗಳಲ್ಲಿ ಒಂದು. ಶತಮಾನಗಳ ಹಿಂದಿನಿಂದಲೂ ಕಮ್ಮಾರಿಕೆ ನಡೆಯುತ್ತಾ ಬಂದಿದೆ. ಕೃಷಿಗೆ, ಕಟ್ಟಡ ನಿರ್ಮಾಣಕ್ಕೆ, ಮನೆ ಬಳಕೆಗೆ ಬೇಕಾದ ಅನೇಕ ಉಪಕರಣಗಳನ್ನು ಕಮ್ಮಾರರು ತಯಾರಿಸಿ ಕೊಡುತ್ತಿದ್ದರು. ಕಮ್ಮಾರರ ಕೆಲಸ ಸುಲಭದ್ದಾಗಿರಲಿಲ್ಲ.

ಕಮ್ಮಾರಿಕೆ ಕೌಶಲ್ಯ ಮತ್ತು ಶ್ರಮ ಬೇಡುವ ಕೆಲಸ. ದೈಹಿಕ ಶಕ್ತಿಯನ್ನು ಬಳಸಿ ಕಮ್ಮಾರಿಕೆ ಕೆಲಸ ಮಾಡಬೇಕು. ಅಲ್ಲದೇ ಕೆಲಸ ಮುಗಿಸಲು ಹೆಚ್ಚುವರಿ ನೆರವು ಪಡೆಯಬೇಕಾದ ಅಗತ್ಯವೂ ಬೀಳುತ್ತಿತ್ತು. ದೀರ್ಘ ಕಾಲ ಈ ಕೆಲಸ ಮಾಡುವುದರಿಂದ ಅತ್ರಾಲ್ಜಿಯಾ, ಅಥೆಟೋಸಿಸ್, ಮ್ಯೆಯಾಲ್ಜಿಯಾ ಮತ್ತು ಉಸಿರಾಟ ಸಂಬಂಧಿ ತೊಂದರೆಗಳು ಉಂಟಾಗುವ ಸಾಧ್ಯತೆ ಹೆಚ್ಚು. ಕಬ್ಬಿಣದ ಉಪಕರಣಗಳನ್ನು ತಯಾರಿಸಲು ಕುಲುಮೆ ಮುಂದೆ ಗಂಟೆಗಟ್ಟಲೆ ಕುಳಿತುಕೊಳ್ಳಬೇಕಾಗಿತ್ತು. ಸಿಕ್ಕಾಪಟ್ಟೆ ದಣಿವು ಉಂಟಾಗುತ್ತಿತ್ತು. ಅತ್ಯಾಧುನಿಕ ತಂತ್ರಜ್ಞಾನಗಳು ಬಂದ ನಂತರವೂ ಬಹಳಷ್ಟು ಕಮ್ಮಾರರು ಈಗಲೂ ಹಳೆಯ, ಪಾರಂಪರಿಕ ಪದ್ಧತಿಯನ್ನೇ ಚಮ್ಮಾರಿಕೆಗೆ ಬಳಸುತ್ತಾರೆ. ಕೆಲವರು ಮಾತ್ರ ಆಧುನಿಕತೆಗೆ ತೆರೆದುಕೊಂಡಿದ್ದಾರೆ.

ಕಮ್ಮಾರಿಕೆ ಮೊದಲಿನಿಂದಲೂ ಗಂಡಸರ ವೃತ್ತಿ ಆಗಿತ್ತು. ಕಮ್ಮಾರಿಕೆಯ ಕಷ್ಟಗಳನ್ನು ಹತ್ತಿರದಿಂದ ನೋಡಿದರೆ ಯುವ ಜನಾಂಗ ಕಮ್ಮಾರಿಕೆಯನ್ನು ಗಣನೆಗೆ ತೆಗೆದುಕೊಳ್ಳುವುದು ಕಷ್ಟ. ಅಲ್ಲದೆ ಕಮ್ಮಾರಿಕೆ ಮುಂದುವರೆಸಲು ಮನಸ್ಸು ಮಾಡುವುದು ಕೂಡ ಅಸಾಧ್ಯ. ಹಾಗಾಗಿ ಕಮ್ಮಾರಿಕೆ ವೃತ್ತಿಯನ್ನು ಸುಲಭಗೊಳಿಸಲು ಸೆಲ್ಕೋ ಸಂಸ್ಥೆ ಸೌರ ಶಕ್ತಿ ಆಧರಿತ ಕುಲುಮೆ ತಯಾರು ಮಾಡಿ ಒದಗಿಸಿದೆ. ಈ ಉಪಕರಣದಿಂದಾಗಿ ಕಮ್ಮಾರಿಕೆ ವೃತ್ತಿಯಲ್ಲಿರುವ ಕಷ್ಟಗಳು ಕಡಿಮೆಯಾಗುವುದಲ್ಲದೆ ಕೆಲಸದ ವೇಗ ಹೆಚ್ಚುತ್ತದೆ. ಶುದ್ಧವಾದ ವಾತಾವರಣದಲ್ಲಿ ಕೆಲಸ ಮಾಡಬಹುದಾದ ವ್ಯವಸ್ಥೆ ಕಲ್ಪಿಸುವುದಲ್ಲದೆ ಆದಾಯ ಕೂಡ ಹೆಚ್ಚಿಸುವಂತೆ ಮಾಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಸೌರಶಕ್ತಿ ಆಧರಿತ ಕುಲುಮೆಯನ್ನು ಮಹಿಳೆಯರು ಕೂಡ ಬೇರೆ ಯಾರದೇ ನೆರವು ಕೇಳದೆ ಸುಲಭವಾಗಿ ಬಳಸುವಂತೆ ವಿನ್ಯಾಸ ಮಾಡಲಾಗಿದೆ. ಈ ವಿನ್ಯಾಸ ಮುಂದಿನ ಜನಾಂಗವನ್ನು ಕಮ್ಮಾರಿಕೆ ವೃತ್ತಿ ಮುಂದುವರೆಸಿಕೊಂಡು ಹೋಗಲು ಸ್ಫೂರ್ತಿ ನೀಡುತ್ತದೆ ಕೂಡ.





ಸಾಮಾನ್ಯವಾಗಿ ಬಹುತೇಕ ಕಸುಬುಗಳಲ್ಲಿ ಮಹಿಳೆಯರು ಕಷ್ಟಕರವಾದ ಕೆಲಸಗಳನ್ನು ನಿಭಾಯಿಸುತ್ತಿರುತ್ತಾರೆ. ಉದಾಹರಣೆಗೆ ಕುಂಬಾರಿಕೆಯಲ್ಲಿ ಮಣ್ಣನ್ನು ಕಲೆಸುವುದು, ಕೃಷಿ ಕುಟುಂಬಗಳಲ್ಲಿ ಭತ್ತ ತೊಳೆಯುವುದು, ಭತ್ತ ಹೊರುವುದು ಇತ್ಯಾದಿ ಕೆಲಸಗಳು ಮತ್ತು ಕಮ್ಮಾರಿಕೆ ವೃತ್ತಿಯಲ್ಲಿ ಕುಲುಮೆ ಮುಂದೆ ಬೆಂಕಿ ಉರಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಕುಂಬಾರಿಕೆಯಲ್ಲಿ ಮಣ್ಣು ಕಲೆಸುವ ಯಂತ್ರ, ಅಕ್ಕಿ ತಯಾರಿಕೆಗೆ ರೈಸ್ ಮಿಲ್, ಕಮ್ಮಾರಿಕೆಗೆ ಕುಲುಮೆಗಳು ಹೀಗೆ ಆಯಾಯ ವೃತ್ತಿಗೆ ಬೇಕಾದ ತಂತ್ರಜ್ಞಾನಗಳನ್ನು ಬಳಸುವುದರಿಂದ ದೈಹಿಕ ಶ್ರಮ ಕಡಿಮೆಗೊಳಿಸಬಹುದು. ಅನಾರೋಗ್ಯದಿಂದ ದೂರ ಇರಬಹುದು. ಅಲ್ಲದೇ ಮಹಿಳೆಯರು ಇನ್ನಿತರ ಕೆಲಸಗಳಲ್ಲಿ ಸುಲಭವಾಗಿ ತೊಡಗಿಸಿಕೊಳ್ಳಬಹುದು.



ತಮಿಳುನಾಡಿನ ತಿರುಪ್ಪಾಚೆಟ್ಟಿ ಜಿಲ್ಲೆಯ ಪಂಚವರ್ಣಂ ಎಂಬ ಮಹಿಳೆ ತನ್ನ ಗಂಡನಿಗೆ ಕಮ್ಮಾರಿಕೆಯಲ್ಲಿ ನೆರವಾಗುತ್ತಿದ್ದರು. ಗಂಡ ಕಬ್ಬಿಣವನ್ನು ಸುತ್ತಿಗೆಯಿಂದ ಬಡಿದು ಆಕಾರ ಕೊಡುವಾಗ ಆಕೆ ಕುಲುಮೆಯಿಂದ ಬೆಂಕಿ ಹಾಯಿಸುವ ಕೆಲಸ ನಿರ್ವಹಿಸುತ್ತಿದ್ದರು. ಹಲವು ತಲೆಮಾರುಗಳಿಂದ ಸಾಂಪ್ರದಾಯಿಕ ಪದ್ಧತಿಯಲ್ಲಿ ಅವರ ಕುಟುಂಬ ಚಮ್ಮಾರಿಕೆ ವೃತ್ತಿ ನಡೆಸುತ್ತಿತ್ತು.

ತಿರುಪ್ಪಾಚೆಟ್ಟಿ ವಿವಿಧ ರೀತಿಯ ಕತ್ತಿ ತಯಾರಿಕೆಗೆ ಜನಪ್ರಿಯವಾದ ಊರು. ಸೆಲ್ಕೋ ಸಂಸ್ಥೆ ಕೋವಿಡ್ ಲಾಕ್ ಡೌನ್ ಸಂದರ್ಭದಲ್ಲಿ ಅಲ್ಲಿ 5 ಸೌರ ಶಕ್ತಿ ಆಧರಿತ ಕುಲುಮೆಗಳನ್ನು ಸ್ಥಾಪಿಸಿತು. ಸೆಲ್ಕೋದ ಪ್ರತಿನಿಧಿ ಪಂಚವರ್ಣಂ ಅವರ ಕುಟುಂಬವನ್ನೂ ಸಂಪರ್ಕಿಸಿ ಸೌರಶಕ್ತಿ ಆಧರಿತ ಕುಲುಮೆ ಕುರಿತ ಮಾಹಿತಿ ನೀಡಿದರು. ಲಾಕ್ ಡೌನ್ ಕಾರಣ ಆರ್ಥಿಕ ಪರಿಸ್ಥಿತಿ ಸರಿ ಇರಲಿಲ್ಲವಾದ್ದರಿಂದ ಅವರು ಆಸಕ್ತಿ ತೋರಿಸಲಿಲ್ಲ. ಯಾವಾಗ ಲಾಕ್ ಡೌನ್ ಮುಗಿಯಿತೋ ಆಗ ಪಂಚವರ್ಣಂ ಅವರ ಪತಿ ಸೆಲ್ಕೋ ಸಂಸ್ಥೆಯನ್ನು ಸಂಪರ್ಕಿಸಿ ಸೌರ ಶಕ್ತಿ ಆಧರಿತ ಕುಲುಮೆ ಅಳವಡಿಸಲು ಕೇಳಿಕೊಂಡರು.

ಕುಟುಂಬದ ಆರ್ಥಿಕ ಪರಿಸ್ಥಿತಿ ಸರಿ ಇಲ್ಲದ ಕಾರಣ ಪಂಚವರ್ಣಂ ಅವರಿಗೆ ಕುಲುಮೆ ಖರೀದಿ ಸಾಧ್ಯವಾಗಲಿಲ್ಲ. ಆಗ ಅವರಿಗೆ ಗ್ಲೋ ಸಂಸ್ಥೆ ಆರ್ಥಿಕ ಸಹಾಯ ಒದಗಿಸಿತು. (ಗ್ಲೋ ಎಂದರೆ ಗೋ ಲೈಟ್ ಅವರ್ ವರ್ಲ್ಡ್ ಎನ್ನುವುದರ ಹ್ರಸ್ವರೂಪ. ಈ ಸಂಸ್ಥೆ ಆಫ್ರಿಕಾ ಮತ್ತು ಏಷ್ಯಾದ ಹಿಂದುಳಿದ ಸಮುದಾಯಗಳಲ್ಲಿ ಹಸಿರು ಶಕ್ತಿ ಬಳಕೆಯನ್ನು ಉತ್ತೇಜಿಸುವ ಕೆಲಸ ಮಾಡುತ್ತದೆ.) ಪಂಚವರ್ಣಂ ಅವರು ನೆರೆಹೊರೆಯವರಿಂದ ಒಂದಷ್ಟು ಆರ್ಥಿಕ ನೆರವನ್ನೂ ಪಡೆದುಕೊಂಡರು. ಅನಂತರ ಪಂಚವರ್ಣಂ ಮತ್ತು ಅವರ ಪತಿ ಸೌರ ಶಕ್ತಿ ಆಧರಿತ ಪಡೆದುಕೊಂಡರು. ಇದರಿಂದ ದಿನಪೂರ್ತಿ ಕುಲುಮೆ ಉರಿಯುವಂತೆ ನೋಡಿಕೊಳ್ಳಬೇಕಾದ ಅನಿವಾರ್ಯತೆ ಇಲ್ಲವಾಯಿತು. ಈ ಹೊಸ ತಂತ್ರಜ್ಞಾನದ ನೆರವಿನಿಂದ ಈಗ ಪಂಚವರ್ಣಂ ಅವರು ಕೂಡ ಗಂಡನ ನೆರವಿಲ್ಲದೆ ಕಬ್ಬಿಣದ ಸಲಕರಣೆಗಳನ್ನು ತಯಾರಿಸುತ್ತಾರೆ. ಈ ಮೂಲಕ ಆ ಊರಿನ ಮೊದಲ ಮಹಿಳಾ ಕಮ್ಮಾರ್ತಿ ಎನಿಸಿಕೊಂಡಿದ್ದಾರೆ. ಪಂಚವರ್ಣಂ ಅವರು ಸಲಕರಣೆಗಳನ್ನು ತಯಾರಿಸುವುದರಿಂದ ಈಗ ಅವರ ಪತಿ ಆ ಸಲಕರಣೆಗಳನ್ನು ಮಾರಾಟ ಮಾಡಲು ಸಮಯ ಕೊಡುತ್ತಾರೆ. ಅದರಿಂದಾಗಿ ಅವರ ಕುಟುಂಬದ ಆದಾಯ ಹೆಚ್ಚಿದೆ. ಕುತೂಹಲಕರ ವಿಚಾರವೆಂದರೆ ಆ ದಂಪತಿ ಕೇವಲ 28 ದಿನದಲ್ಲೇ ಸೌರಶಕ್ತಿ ಕುಲುಮೆ ಅಳವಡಿಸಲು ಪಡೆದಿದ್ದ ಸಾಲ ತೀರಿಸಿದ್ದಾರೆ. ಈಗ ದಂಪತಿಯ ಇಬ್ಬರು ಮಕ್ಕಳು ಕೂಡ ಕಮ್ಮಾರಿಕೆ ವೃತ್ತಿಯಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ.

ಸೌರ ಶಕ್ತಿ ಆಧರಿತ ತಂತ್ರಜ್ಞಾನದಿಂದಾಗಿ ಕಮ್ಮಾರಿಕೆ ವೃತ್ತಿಯಲ್ಲಿದ್ದ ಲಿಂಗ ಅಸಮಾನತೆ ಕೂಡ ಇಲ್ಲವಾಗಿದೆ. ಪಂಚವರ್ಣಂ ಅವರನ್ನು ಮಾದರಿಯಾಗಿ ಇಟ್ಟುಕೊಂಡು ಇನ್ನೂ ಹಲವು ಮಹಿಳೆಯರು ಕಮ್ಮಾರಿಕೆ ವೃತ್ತಿ ಆರಿಸಿಕೊಳ್ಳಲಿದ್ದಾರೆ. ಕೆಲಸ ಸುಲಭವಾದ್ದರಿಂದ ಹೊಸ ಜನಾಂಗ ಕೂಡ ಚಮ್ಮಾರಿಕೆ ವೃತ್ತಿಯಲ್ಲಿ ಆಸಕ್ತಿ ತೋರಿಸುತ್ತಿದೆ. ಹಾಗಾಗಿ ಈ ಪಾರಂಪರಿಕ ಕಸುಬು ಮುಂದಿನ ಜನಾಂಗಕ್ಕೂ ದಾಟಲಿದೆ. ಸೌರ ಶಕ್ತಿ ತಂತ್ರಜ್ಞಾನ ಉತ್ಪಾದನೆ ಹೆಚ್ಚಿಸಿ ಆದಾಯವನ್ನೂ ಹೆಚ್ಚಿಸಿರುವುದು ಹೊಸ ಉತ್ಸಾಹವನ್ನು ತುಂಬಿಸಿದೆ.





# ಸೆಲ್ಕೋ ಯಾಕೆ ವಿಭಿನ್ನ?

## ಅತ್ಯುತ್ತಮ ಗ್ರಾಹಕ ಸೇವೆಯೇ ಸೆಲ್ಕೋ ಶಕ್ತಿ

ಉತ್ಪನ್ನಗಳ ಮಾರಾಟದ ನಂತರ ಎಷ್ಟು ಚೆನ್ನಾಗಿ ಗ್ರಾಹಕ ಸೇವೆ ಒದಗಿಸುತ್ತೇವೆ ಅನ್ನುವುದರಿಂದ ಗ್ರಾಹಕರು ಮತ್ತು ಗ್ರಾಹಕರ ಮಧ್ಯದ ಸಂಬಂಧವನ್ನು ನಿರ್ಧರಿಸಬಹುದು. ಉತ್ಪನ್ನಗಳ ಮಾರಾಟ ಕಂಪನಿಗೆ ಆದಾಯವನ್ನು ತರುತ್ತದೆ. ಅದೇ ಹೊತ್ತಿಗೆ ಅತ್ಯುತ್ತಮ ಸರ್ವೀಸ್ ಒದಗಿಸುವುದರಿಂದ ಆ ಗ್ರಾಹಕ ಯಾವತ್ತೂ ಕಂಪನಿಯ ಜೊತೆಗೆ ನಿಲ್ಲುವಂತೆ ಮಾಡಬಹುದು.

ಮೈಕ್ರೋಸಾಫ್ಟ್ ಸಂಸ್ಥೆ 2017ರಲ್ಲಿ ನಡೆಸಿದ ದಿ ಸ್ಟೇಟ್ ಆಫ್ ಗ್ಲೋಬಲ್ ಕಸ್ಟಮರ್ ಸರ್ವೀಸ್ ಎಂಬ ಅಧ್ಯಯನದ ಪ್ರಕಾರ ಶೇ.68 ಗ್ರಾಹಕರು ಆಫರ್ ನೀಡುವ ಅಥವಾ ಸಂಪರ್ಕದಲ್ಲಿದ್ದು ಅತ್ಯುತ್ತಮ ಗ್ರಾಹಕ ಸೇವೆ ಒದಗಿಸುವ ಸಂಸ್ಥೆಗಳ ಪರವಾಗಿ ನಿಂತಿರುತ್ತಾರೆ. ನಗರಗಳಲ್ಲಿ ಗ್ರಾಹಕ ಸೇವೆ ಒದಗಿಸುವುದು ಸುಲಭ. ಆದರೆ ಸಂಪರ್ಕ ಸಾಧ್ಯವಿಲ್ಲದ ಗ್ರಾಮೀಣ ಪ್ರದೇಶಗಳಲ್ಲಿ ಸರ್ವೀಸ್ ಮಾಡುವುದು ಬಹಳ ಸವಾಲಿನ ಸಂಗತಿ.

ಆದರೆ ಸೆಲ್ಕೋ ಮಾತ್ರ ತಮ್ಮ ಗ್ರಾಹಕರನ್ನು ಗ್ರಾಹಕರಾಗಿಯಷ್ಟೇ ನೋಡುವುದಿಲ್ಲ. ಗ್ರಾಹಕ ಕಷ್ಟ ಪಡದಂತೆ ಅತ್ಯುತ್ತಮ ಗ್ರಾಹಕ ಸೇವೆ ಒದಗಿಸುತ್ತದೆ. ಆರಂಭದಲ್ಲೇ ಮಾರಾಟದ ನಂತರದ ಸರ್ವೀಸ್ ಮಹತ್ವವನ್ನು ಮನಗಂಡ ಸೆಲ್ಕೋ ಅದ್ಭುತವಾದ ಗ್ರಾಹಕ ಸೇವೆ ಪ್ರತಿನಿಧಿಗಳ ತಂಡವನ್ನು ರೂಪಿಸಿತು. ಆ ತಂಡ ವಾರಂಟಿ ಕಾಲದಲ್ಲಿಯೂ ವಾರಂಟಿ ಮುಗಿದ ಬಳಿಕವೂ ಗ್ರಾಹಕರಿಗೆ ಯಾವುದೇ ತೊಂದರೆಯಾಗದಂತೆ ಗ್ರಾಹಕ ಸೇವೆ ನೀಡುತ್ತದೆ. ಗ್ರಾಹಕ ಸೇವೆ ಪ್ರತಿನಿಧಿಗಳ ಕರ್ತವ್ಯ ಪ್ರಜ್ಞೆ, ಶ್ರದ್ಧೆ ಅಸಾಧಾರಣವಾದುದು.

### ಗ್ರಾಹಕ ಸೇವೆ ವಿಭಾಗ

ಗ್ರಾಹಕರಿಗೆ ವಿವಿಧ ವಿನ್ಯಾಸದ ಅತ್ಯುತ್ತಮ ಉತ್ಪನ್ನಗಳನ್ನು ಒದಗಿಸಿರುವ ಸೆಲ್ಕೋ, ಪ್ರತಿಯೊಬ್ಬ ಗ್ರಾಹಕರಿಗೂ ಅವಶ್ಯಕ ಸರ್ವೀಸ್ ನೀಡುವ ಮೂಲಕ ಜನಪ್ರಿಯತೆ ಗಳಿಸಿದೆ. ದಶಕಗಳ ಹಿಂದೆ ಗ್ರಾಹಕ ಸೇವೆ ವಿಭಾಗ ಆರಂಭಿಸಿದಾಗಿನಿಂದಲೂ ಒಂದು ಅದ್ಭುತ ತಂಡ ಗ್ರಾಹಕರ ನೆಮ್ಮದಿಗಾಗಿ ಶ್ರದ್ಧೆಯಿಂದ ಕೆಲಸ ಮಾಡುತ್ತವೇ ಇದೆ. 2016ರಲ್ಲಿ ಸೆಲ್ಕೋ ರಾಜ್ಯದುದ್ದಕ್ಕೂ ಅತ್ಯುನ್ನತ ಮಟ್ಟದ ಸರ್ವೀಸ್ ಶಾಖೆಗಳನ್ನು ಆರಂಭಿಸಲು ನಿರ್ಧರಿಸಿತು. ಇದರಿಂದಾಗಿ ಪ್ರತಿಯೊಬ್ಬ ಗ್ರಾಹಕರಿಗೂ ಸರಿಯಾದ ಸಮಯದಲ್ಲಿ ಗ್ರಾಹಕ ಸೇವೆ ಒದಗಿಸುವ, ಸಿಸ್ಟಮ್ ರಿಪೇರಿ ಮಾಡಿ ಕೊಡುವ ಉದ್ದೇಶ ಇತ್ತು. ಪ್ರಸ್ತುತ ಕರ್ನಾಟಕ, ಬಿಹಾರ, ಮಹಾರಾಷ್ಟ್ರ, ತಮಿಳುನಾಡಿನಲ್ಲಿ ಒಟ್ಟು ಸೆಲ್ಕೋದ 10 ಸರ್ವೀಸ್ ಶಾಖೆಗಳಿವೆ.

> **ಸೆಲ್ಕೋ ಮಾತ್ರ ತಮ್ಮ ಗ್ರಾಹಕರನ್ನು ಗ್ರಾಹಕರಾಗಿಯಷ್ಟೇ ನೋಡುವುದಿಲ್ಲ. ಗ್ರಾಹಕ ಕಷ್ಟ ಪಡದಂತೆ ಅತ್ಯುತ್ತಮ ಗ್ರಾಹಕ ಸೇವೆ ಒದಗಿಸುತ್ತದೆ. ಆರಂಭದಲ್ಲೇ ಮಾರಾಟದ ನಂತರದ ಸರ್ವೀಸ್ ಮಹತ್ವವನ್ನು ಮನಗಂಡ ಸೆಲ್ಕೋ ಅದ್ಭುತವಾದ ಗ್ರಾಹಕ ಸೇವೆ ಪ್ರತಿನಿಧಿಗಳ ತಂಡವನ್ನು ರೂಪಿಸಿತು.**

2020ರಲ್ಲಿ ಸೆಲ್ಕೋ ಸೇವಾ ಬಂಧು ಎಂಬ ವಿಶಿಷ್ಟ ಯೋಜನೆ ಆರಂಭಿಸಿತು. ಗ್ರಾಮೀಣ ಭಾಗದ ಯುವ ಜನತೆ ಮತ್ತು ಮಹಿಳೆಯರಿಗೆ ಉದ್ಯೋಗಾವಕಾಶ ನೀಡುವ ವಿಭಿನ್ನ ಯೋಜನೆ ಇದು. ಈ ಯೋಜನೆ ಸೌರಶಕ್ತಿ ಉತ್ಪನ್ನಗಳ ಗ್ರಾಹಕ ಸೇವೆಯನ್ನು ಪರಿಣಾಮಕಾರಿಗೊಳಿಸುವುದಲ್ಲದೆ ಅನೇಕರಿಗೆ ಉದ್ಯೋಗಾವಕಾಶ ಒದಗಿಸಿ ಅಥವಾ ಆದಾಯದ ಮೂಲ ಪರಿಚಯಿಸಿ ಅವರಿಗೂ ಅವರ ಕುಟುಂಬಕ್ಕೂ ಶಕ್ತಿ ತುಂಬುವ ಕೆಲಸ ಮಾಡುತ್ತದೆ.

ಸಾಮಾನ್ಯವಾಗಿ ಸೇವಾ ಬಂಧು ಆಯ್ಕೆಯಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆ ನೀಡಲಾಗುತ್ತದೆ. ಆಯ್ಕೆಯಾದ ಸೇವಾ ಬಂಧುವಿಗೆ ಕಮಿಷನ್ ಆಧಾರದಲ್ಲಿ ದುಡಿಯುವ ಅವಕಾಶ ಸಿಗುತ್ತದೆ. ಸೇವಾ ಬಂಧು ಯೋಜನೆಯಿಂದ ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಷ್ಟಿ, ಕೌಶಲ್ಯ ಅಭಿವೃದ್ಧಿ, ಸುಸ್ಥಿರ ಆದಾಯ ಮತ್ತು ಸುಸ್ಥಿರತೆ



ಸಾಧಿಸಬಹುದಾಗಿದೆ. ತಿಂಗಳಿಗೆ ಸುಮಾರು ರು.10,000ದಿಂದ ಆರಂಭವಾಗಿ ರು.22,000ದವರೆಗೆ ಆದಾಯ ಗಳಿಸುವ ಅವಕಾಶವನ್ನು ಸೇವಾ ಬಂಧು ಯೋಜನೆ ಒದಗಿಸುತ್ತದೆ.

ಸೆಲ್ಕೋ ಸಂಸ್ಥೆ ಗ್ರಾಹಕರ ಜೊತೆ ವಾರ್ಷಿಕ ನಿರ್ವಹಣೆ ಒಪ್ಪಂದ ಮಾಡಿಕೊಳ್ಳುತ್ತದೆ. ಈ ಒಪ್ಪಂದದ ಪ್ರಕಾರ ಎರಡು ಉಚಿತ ಸರ್ವೀಸ್ ಮತ್ತು ಒಂದು ಉಚಿತ ದೂರು ಕರೆ ಸೌಲಭ್ಯ ನೀಡುತ್ತದೆ. ಎರಡು ಉಚಿತ ಸರ್ವೀಸ್ ಅನ್ನು ಸರಿಯಾದ ಸಮಯಕ್ಕೆ ಆಯಾ ಪ್ರಾದೇಶಿಕ ಶಾಖೆಗಳ ತಂತ್ರಜ್ಞರು ಕೈಗೊಳ್ಳುತ್ತಾರೆ. ಬೇರೆ ಕಡೆಗಳಲ್ಲಿ ಗ್ರಾಹಕರೊಂದಿಗೆ ನೇರವಾದ ಮಾನವ ಸಂಪರ್ಕ ಇರದೇ ಇರುವ ಸಂದರ್ಭದಲ್ಲಿ ಸೆಲ್ಕೋದ ಸಿಬ್ಬಂದಿಗಳು ಮಾತ್ರ ಗ್ರಾಹಕರ ಜೊತೆ ಉತ್ತಮ ಬಾಂಧವ್ಯ ಸಾಧಿಸಿದ್ದಾರೆ ಮತ್ತು ನಿಭಾಯಿಸುತ್ತಿದ್ದಾರೆ.

ಒಂದು ವೇಳೆ ಗ್ರಾಹಕರ ಮನೆಯ ಸಮೀಪಕ್ಕೆ ಯಾರಾದರೂ ಸಿಬ್ಬಂದಿ ಭೇಟಿ ಕೊಟ್ಟರೆ ಸೌರಶಕ್ತಿ ಸಿಸ್ಟಮ್ ಅನ್ನು ಪರೀಶೀಲಿಸುತ್ತಾರೆ. ಇದು ನಿಯಮಿತ ಸರ್ವೀಸ್ ಲೆಕ್ಕದಲ್ಲಿ ಬರಹುವುದಿಲ್ಲ. ಸೆಲ್ಕೋ ಸಿಬ್ಬಂದಿ ಅತಿ ವೇಗವಾಗಿ ಗ್ರಾಹಕರ ಸೇವೆಗೆ ಲಭ್ಯರಿರುವುದರಿಂದಲೇ ಗ್ರಾಹಕರ ಜೊತೆಗಿನ ಸಂಬಂಧ ಉತ್ತಮವಾಗಿದೆ. ಗ್ರಾಹಕ ಸೇವೆ ವಿಭಾಗ ಪ್ರತೀ ಗ್ರಾಹಕರ ಸರ್ವೀಸ್ ಕುರಿತಾದ ಮಾಹಿತಿ ಹೊಂದಿರುತ್ತದೆ ಮತ್ತು ಗ್ರಾಹಕ ಸೇವೆ ಉತ್ತಮಗೊಳಿಸಲು ಗ್ರಾಹಕರ ಪ್ರತಿಕ್ರಿಯೆ ಪಡೆಯುತ್ತಿರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಗ್ರಾಹಕ ಸೇವೆ ಸಿಬ್ಬಂದಿ ಗ್ರಾಹಕರಿಗೆ ಮೂಲಭೂತ ತರಬೇತಿ ನೀಡಿರುತ್ತದೆ. ಅದರಿಂದ ಸಣ್ಣ ಸಣ್ಣ ಸಮಸ್ಯೆಗಳನ್ನು ಗ್ರಾಹಕರೇ ಪರಿಹರಿಸಬಹುದಾಗಿದೆ.

ಈ ಎಲ್ಲಾ ಕಾರಣಗಳಿಂದಾಗಿಯೇ ಸೆಲ್ಕೋ ಎಲ್ಲರಿಗಿಂತ ಭಿನ್ನವಾಗಿ ನಿಲ್ಲುತ್ತದೆ.




# 20 ದಿನದಲ್ಲಿ ಸೌರ ಶಕ್ತಿ ಆಧರಿತ ಕೋವಿಡ್ ಆಸ್ಪತ್ರೆ ನಿರ್ಮಾಣ

## ಕೊರೋನಾ ವಿರುದ್ಧದ ಹೋರಾಟದಲ್ಲಿ ಸೆಲ್ಕೋ ಭಾಗಿ

ಡಾಕ್ಟರ್ಸ್ ಫಾರ್ ಯೂ(ಡಿಎಫ್ ವೈ), ಕರ್ನಾಟಕ ವಿದ್ಯುತ್ ನಿಗಮ, ಬೋಯಿಂಗ್ ಇಂಡಿಯಾ ಸಂಸ್ಥೆಗಳ ಜೊತೆಗಿನ ಸಹಯೋಗದಲ್ಲಿ ಸೆಲ್ಕೋ ಫೌಂಡೇಷನ್ ಬೆಂಗಳೂರಿನ ಯಲಹಂಕದಲ್ಲಿ 100 ಆಕ್ಸಿಜನ್ ಬೆಡ್ ಸೌಲಭ್ಯ ಇರುವ ಕೋವಿಡ್ ಆಸ್ಪತ್ರೆಯನ್ನು ನಿರ್ಮಿಸಿದೆ.

ಕೋವಿಡ್ ಸೋಂಕಿನ ತೀವ್ರತೆ ಕಡಿಮೆ ಇರುವವರು, ಮಧ್ಯಮ ಹಂತದ ಸೋಂಕಿನ ತೀವ್ರತೆ ಹೊಂದಿರುವವರಿಗೆ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುವುದು. ಆ ಮೂಲಕ ಆ ಭಾಗದ ಆಸ್ಪತ್ರೆಗಳ ಒತ್ತಡ ಕಡಿಮೆಗೊಳಿಸುವ ಕೆಲಸ ನಡೆದಿದೆ.

2021ನೇ ಇಸವಿ ಮೇ 17ರಂದು ಈ ಆಸ್ಪತ್ರೆ ಉದ್ಘಾಟನೆ ಮಾಡಲಾಯಿತು. ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ ಕರ್ನಾಟಕದ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪನವರು, "ಸರ್ಕಾರದ ಕೋವಿಡ್ ವಿರುದ್ಧದ ಹೋರಾಟದಲ್ಲಿ ಕೈಗಾರಿಕಾ ಸಂಸ್ಥೆಗಳು ಮತ್ತು ಎನ್‌ಜಿಓಗಳು ಕೈ ಜೋಡಿಸಿರುವುದು ಶ್ಲಾಘನೀಯ' ಎಂದಿದ್ದಾರೆ. ಇದೇ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ನಿಗಮದ ಜಾಗದಲ್ಲಿ ಸೆಲ್ಕೋ ಫೌಂಡೇಷನ್, ಬೋಯಿಂಗ್ ಮತ್ತು ಡಾಕ್ಟರ್ಸ್ ಫಾರ್ ಯೂ ಸಂಸ್ಥೆಗಳು ಸೇರಿಕೊಂಡು ಆಸ್ಪತ್ರೆ ನಿರ್ಮಾಣ ಮಾಡಿರುವುದಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

ಆ ಆಸ್ಪತ್ರೆ ನಿರ್ಮಾಣಕ್ಕೆ ಸೆಲ್ಕೋ ಫೌಂಡೇಷನ್, ಬೋಯಿಂಗ್ ಇಂಡಿಯಾ ಹಣಕಾಸು ನೆರವನ್ನು ನೀಡಿದೆ. ಡಾಕ್ಟರ್ಸ್ ಫಾರ್ ಯೂ ಸಂಸ್ಥೆ ಆಸ್ಪತ್ರೆಗೆ ಅವಶ್ಯವಿರುವ ವೈದ್ಯಕೀಯ ಸಿಬ್ಬಂದಿ ಮತ್ತು ವೈದ್ಯಕೀಯ ಸೇವೆಗಳನ್ನು ಒದಗಿಸಿದೆ. ಇದರ ಜೊತೆಗೆ ಆಸ್ಪತ್ರೆಗೆ ಬೇಕಾದ ಹಲವು ಪೂರ್ವ ನಿರ್ಮಿತ ಘಟಕಗಳನ್ನು ಸೆಲ್ಕೋ ಫೌಂಡೇಷನ್ ನೀಡಿದೆ. ಆಸ್ಪತ್ರೆ ನಿರ್ಮಾಣಕ್ಕೆ ಬೇಕಾಗಿದ್ದ ಜಾಗವನ್ನು ಕರ್ನಾಟಕ ವಿದ್ಯುಮ್ ನಿಗಮ ಒದಗಿಸಿದೆ.



### ಕೇವಲ 21 ದಿನಗಳಲ್ಲಿ ಆಸ್ಪತ್ರೆ ನಿರ್ಮಾಣ

21 ದಿನಗಳಿಗಿಂತ ಕಡಿಮೆ ಅವಧಿಯಲ್ಲಿ ಆಸ್ಪತ್ರೆ ನಿರ್ಮಾಣವಾಗಿರುವುದು ಅಚ್ಚರಿದಾಯಕ ಸಂಗತಿ. ಈ ಆಸ್ಪತ್ರೆಯಲ್ಲಿರುವ 100 ಆಕ್ಸಿಜನ್ ಬೆಡ್‌ಗಳಲ್ಲಿ, 10 ಬೆಡ್‌ಗಳನ್ನು ಐಸಿಯು ಸೇವೆಗಳಿಗೆ ಸಿದ್ಧಗೊಳಿಸಲಾಗಿದೆ. 20 ಬೆಡ್‌ಗಳನ್ನು ಹೆಚ್ಚು ಅವಲಂಬಿತ ಘಟಕದಲ್ಲಿ (ಎಚ್ ಡಿ ಯು– ಹೈ ಡಿಪೆಂಡೆನ್ಸಿ ಯುನಿಟ್) ಬಳಸಲಾಗಿದೆ.

ಆಸ್ಪತ್ರೆಯಲ್ಲಿ ಕೋವಿಡ್ ಸೋಂಕಿತರ ಸಮರ್ಪಕ ಚಿಕಿತ್ಸೆಗೆ ಕಳುಹಿಸುವ ಜಾಗ, ಡಾನಿಂಗ್–ಡಾಫಿಂಗ್ (ಸುರಕ್ಷಿತ ಪರಿಕರಗಳನ್ನು ಧರಿಸುವ, ಕಳಚುವ ಜಾಗ), ಫಾರ್ಮಸಿ, ಪ್ರಯೋಗಾಲಯ, ವಿಶ್ರಾಂತಿ ಕೋಣೆ, ನರ್ಸ್‌ಗಳ ಕೋಣೆ, ವೈದ್ಯಕೀಯ ಸಿಬ್ಬಂದಿಗಳು ಸಮಾಲೋಚನೆ ಮಾಡುವ ಕೋಣೆ ಇವೆ.

"ಈ ಆಸ್ಪತ್ರೆಯು ಸುಸ್ಥಿರ ಯೋಜನೆಗಳ ಮಾದರಿಯಾಗಿ ರಚನೆಯಾಗಿದೆ. ಸೌರ ಶಕ್ತಿಯಂಥಾ ಸುಸ್ಥಿರ ಶಕ್ತಿಯು ಕೋವಿಡ್ ನಂತಹ ಸಾಂಕ್ರಾಮಿಕ ರೋಗ ಸಂಕಷ್ಟ ಕಾಲದಲ್ಲಿ ಪ್ರಮುಖ ಪಾತ್ರ ವಹಿಸಬಲ್ಲದು ಎಂಬುದು ಈ ಮೂಲಕ ಸಾಬೀತಾಗಿದೆ' ಎಂದು ಸೆಲ್ಕೋ ಸಂಸ್ಥೆಯ ಸ್ಥಾಪಕ ಹರೀಶ್ ಹಂದೆ ತಿಳಿಸಿದ್ದಾರೆ.

ಡಾಕ್ಟರ್ಸ್ ಫಾರ್ ಯೂ ಸಂಸ್ಥೆ ಆಸ್ಪತ್ರೆಯಲ್ಲಿ ಸಮರ್ಥ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗಳನ್ನು ಸೇವೆಗೆ ನಿಯೋಜಿಸಿದೆ.

# ಹೈನುಗಾರಿಕೆ ಸುಲಭವಾಯಿತು, ಕಷ್ಟ ದೂರವಾಯಿತು

## ಹೊಸಕೊಪ್ಪದ ರೈತ ಮಹಿಳೆ ಜಾನಕಮ್ಮನ ಸ್ಫೂರ್ತಿ ಕತೆ

ರಾಜ್ಯದಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶ ಯಾವುದು ಎಂದು ಕೇಳಿದರೆ ಅದಕ್ಕೆ ಉತ್ತರ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕು. ದಟ್ಟ ಕಾಡಿನಿಂದ ಆವೃತವಾದ ಅಪ್ಪಟ ಮಲೆನಾಡು. ಈ ಚಂದದ ತಾಲೂಕಿನಲ್ಲಿ ಸುಮಾರು 50 ಮನೆಗಳಿರುವ ಹೊಸಕೊಪ್ಪ ಎಂಬ ಹಳ್ಳಿ ಇದೆ. ಕೃಷಿ ಪ್ರಧಾನವಾದ ಈ ಊರಿನಲ್ಲಿ ಹೈನುಗಾರಿಕೆ ಜನಪ್ರಿಯವಾಗಿದೆ.



ಈ ಹಳ್ಳಿಯಿಂದ 5–6 ಕಿ.ಮೀ. ದೂರದಲ್ಲಿರುವ ಹಾದಿಗಲ್‌ನಲ್ಲಿ ಮಹಿಳೆಯರೇ ನಡೆಸುತ್ತಿರುವ ಹಾದಿಗಲ್ಲು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘವಿದೆ. ಸುತ್ತಮುತ್ತಲಿನ 19 ಗ್ರಾಮಗಳ ರೈತರೆಲ್ಲ ಇಲ್ಲಿಗೇ ಹಾಲು ನೀಡುತ್ತಾರೆ.

ಊರಿನಲ್ಲಿ ಹಾಲು ಉತ್ಪಾದಕರ ಸಂಘವಿದ್ದರೂ ಅಲ್ಲಿನ ಬಹುತೇಕರಿಗೆ ಸೆಲ್ಕೋದ ಸೌರ ಶಕ್ತಿ ಆಧರಿತ ಹಾಲು ಕರೆಯುವ ಯಂತ್ರದ ಕುರಿತು ತಿಳಿದಿರಲಿಲ್ಲ. ಕಡೆಗೊಂದು ದಿನ ಸೋಲಾರ್ ಹಾಲು ಕರೆಯುವ ಯಂತ್ರದ ಕುರಿತು ಮಾಹಿತಿ ಪಡೆದ ಜಾನಕಮ್ಮ ಸೌರಚಾಲಿತ ಹಾಲು ಕರೆಯುವ ಯಂತ್ರವನ್ನು ಪಡೆದು ಬದುಕು ಬದಲಿಸಿಕೊಂಡ ಸ್ಫೂರ್ತಿ ಕಥೆ ಇಲ್ಲಿದೆ.

### ಸವಾಲು ಗೆದ್ದ ಜಾನಕಮ್ಮ

ಪತಿ ತೀರಿಕೊಂಡ ಮೇಲೆ ತವರು ಮನೆಯನ್ನೇ ಆಶ್ರಯಿಸಿ ಬಂದವರು ಜಾನಕಮ್ಮ. ಬದುಕಿಗಾಗಿ ಹೈನುಗಾರಿಕೆ ನಡೆಸುವುದು ಅವಶ್ಯವಾಗಿತ್ತು. ಆ ಕಾರಣಕ್ಕೆ ಬಹಳ ವರ್ಷಗಳಿಂದ ಹೈನುಗಾರಿಕೆಯಿಂದ ಜೀವನ ಸಾಗಿಸಿಕೊಂಡು ಬರುತ್ತಿದ್ದಾರೆ.

ಜಾನಕಮ್ಮನ ಬಳಿ ಒಟ್ಟು ನಾಲ್ಕು ಹಸುಗಳಿವೆ. ದಿವಸಕ್ಕೆ 12 ಲೀ ಹಾಲು ಕರೆಯುತ್ತಾರೆ. ಆದರೆ ಇಷ್ಟು ಕೆಲಸ ಮಾಡುವಾಗ ಅವರಿಗೆ ವಿಪರೀತ ಕೈ ಮತ್ತು ಬೆನ್ನು ನೋವು ಬರುತ್ತಿತ್ತು. ಅಲ್ಲದೇ ಎಲ್ಲಿಗಾದರೂ ಕಾರ್ಯಕ್ರಮಕ್ಕೆ ಹೋದಾಗ ಹಾಲು ಕರೆಯುವ ಕಾರಣದಿಂದ ಸಂಜೆಯಾಗುವುದರೊಳಗೆ ಮನೆ ಸೇರಿಕೊಳ್ಳಬೇಕಾಗಿತ್ತು.

ಜೊತೆಗೆ ವಿದ್ಯುತ್ ಸಮಸ್ಯೆ ಬೇರೆ. ಬೆಳಿಗ್ಗೆ ಮತ್ತು ಸಂಜೆ ಹಾಲು ಕರೆಯುವ ಸಮಯವಾದ 6 ಗಂಟೆಗೆ ವಿದ್ಯುತ್ ಹೋಗಿರುತ್ತಿತ್ತು. ಚಿಮಣಿ ದೀಪ ಹಚ್ಚಿಕೊಂಡು ಅರೆಗತ್ತಲಲ್ಲಿ ಹಾಲು ಕರೆಯುವ ಸ್ಥಿತಿ ಇತ್ತು. ಇದರಿಂದ ಕೆಲವೊಮ್ಮೆ ಸಮಯಕ್ಕೆ ಸರಿಯಾಗಿ ಡೈರಿಗೆ ಹಾಲು ಹಾಕಲು ಸಾಧ್ಯವಾಗುತ್ತಿರಲಿಲ್ಲ.

ಈ ಹಂತದಲ್ಲಿ ಶ್ರೀ ಧರ್ಮಸ್ಥಳ ಗ್ರಾಮ ವಿಕಾಸ ಸಂಘದಿಂದ ಅವರಿಗೆ ಸೌರಚಾಲಿತ ಹಾಲು ಕರೆಯುವ ಯಂತ್ರದ ಕುರಿತು ಗೊತ್ತಾಗುತ್ತದೆ. ಡೈರಿಯ ಅಧ್ಯಕ್ಷೆ ಕಾಮಾಕ್ಷಿಯವರೂ ವಿದ್ಯುತ್ ಸಮಸ್ಯೆಯೂ ಇರುವುದರಿಂದ ಸೌರಚಾಲಿತ ಯಂತ್ರ ತೆಗೆದುಕೊಳ್ಳಿ ಎಂದು ಸಲಹೆ ನೀಡಿದರು. ಆದರೆ ಜಾನಕಮ್ಮನ ಬಳಿ ಆ ಯಂತ್ರ ತೆಗೆದುಕೊಳ್ಳುವಷ್ಟು ಆರ್ಥಿಕ ಸ್ಥಿತಿ ಉತ್ತಮ ಇರಲಿಲ್ಲ.

ಒಂದೊಳ್ಳೆ ದಿನ ಯೋಚನೆ ಮಾಡಿ ಸೋಲಾರ್ ಹಾಲು ಕರೆಯುವ ಯಂತ್ರ ಕೊಳ್ಳುವ ನಿರ್ಧಾರ ಮಾಡಿದರು ಜಾನಕಮ್ಮ. ಅದಕ್ಕಾಗಿ ಒಂದೆರಡು ಬ್ಯಾಂಕ್‌ಗಳನ್ನು ಸಂಪರ್ಕಿಸಿ ಸಾಲ ಕೇಳಿದರು. ಆದರೆ ಅವರು ಸಾಲ ನೀಡಲು ನಿರಾಕರಿಸಿದರು. ಅನಂತರ ಹಾದಿಗಲ್‌ನ ಅಭಯಂ ವಿವಿಧೋದ್ದೇಶ ಸಹಕಾರಿ ಸಂಘ ನಿಯಮಿತ ಸಂಸ್ಥೆ ಅವರಿಗೆ ಸಾಲ ನೀಡಲು ಒಪ್ಪಿತು. ಜಾನಕಮ್ಮನ ಮನೆಗೆ ಕೊನೆಗೂ ಸೌರ ಚಾಲಿತ ಹಾಲು ಕರೆಯುವ ಯಂತ್ರ ಬಂದಿತು.

ಈಗ ಜಾನಕಮ್ಮ 12 ಲೀ ಹಾಲನ್ನು ಸುಲಭವಾಗಿ ಮತ್ತು ವೇಗವಾಗಿ ಕರೆಯುತ್ತಾರೆ. ದೈಹಿಕ ಶ್ರಮ ಕಡಿಮೆಯಾಗಿದೆ. ಸಮಯದ ಉಳಿತಾಯವೂ ಆಗುತ್ತಿದೆ. ಮನೆಯಲ್ಲಿ ಯಾರು ಬೇಕಾದರೂ ಈ ಯಂತ್ರ ಬಳಸಿ ಸುಲಭವಾಗಿ ಹಾಲು ಕರೆಯಬಹುದಾಗಿರುವುದರಿಂದ ದೂರದೂರಿಗೆ ಕಾರ್ಯಕ್ರಮಗಳಿಗೆ ಹೋದಾಗ ಸಂಜೆ ಬೇಗ ಮನೆಗೆ ಬರುವ ಅಗತ್ಯವೂ ಇರುವುದಿಲ್ಲ.

ಜಾನಕಮ್ಮ ಈ ಸೌರಚಾಲಿತ ಹಾಲು ಕರೆಯುವ ಯಂತ್ರದ ಕ್ಷಮತೆಯನ್ನು ನೋಡಿದ ಮೇಲೆ ಇನ್ನೂ ಎರಡು ಹಸುಗಳನ್ನು ಕೊಳ್ಳುವ ಯೋಚನೆಯಲ್ಲಿದ್ದಾರೆ. ಇವರಿಗೆ ಕೃಷಿ ಜಮೀನು ಇರುವುದರಿಂದ ಹೈನುಗಾರಿಕೆಯ ಕಾರಣ ಅವಶ್ಯವಾದ ಗೊಬ್ಬರವೂ ಸಿಗುತ್ತದೆ. ಅದಕ್ಕಾಗಿ ಮತ್ತೆ ಹಣ ಖರ್ಚು ಮಾಡುವ ಅನಿವಾರ್ಯತೆ ಇರುವುದಿಲ್ಲ. ಒಟ್ಟಾರೆ ಜಾನಕಮ್ಮ ಮತ್ತು ಅವರ ಕುಟುಂಬ ಈಗ ನೆಮ್ಮದಿಯಿಂದ ಹೈನುಗಾರಿಕೆ ನಡೆಸುತ್ತಿದೆ.







# ವಿದ್ಯಾರ್ಥಿನಿಯರಿಗೆ ಸೌರಶಕ್ತಿಯೇ ದಾರಿ ದೀಪ

## ಕುಂದಾಪುರದಲ್ಲಿ ಬಡ ಕುಟುಂಬದ ಮನೆಗೆ ಉಚಿತವಾಗಿ ಸೌರ ದೀಪ ಅಳವಡಿಸಿದ ಸೆಲ್ಕೋ

ಕುಂದಾಪುರದ ಉಪ್ಪುಂದ ಎಂಬ ಗ್ರಾಮದಲ್ಲಿ ಒಂದು ಬಡ ಕುಟುಂಬ ಇದೆ. ಆ ಕುಟುಂಬದಲ್ಲಿ ಇಬ್ಬರು ವಿದ್ಯಾರ್ಥಿನಿಯರು ಇದ್ದಾರೆ. ವಿಪರ್ಯಾಸವೆಂದರೆ ಆ ಬಡ ಕುಟುಂಬದಲ್ಲಿ ವಿದ್ಯುತ್ ಸಂಪರ್ಕ ಇರಲಿಲ್ಲ. ಹಾಗಾಗಿ ಆ ಇಬ್ಬರು ವಿದ್ಯಾಭ್ಯಾಸ ನಡೆಸುವುದು ಕಷ್ಟವಾಗುತ್ತಿತ್ತು. ಆ ವಿದ್ಯಾರ್ಥಿಗಳ ತಾಯಿ ಗುಲಾಬಿಯವರು ವಿದ್ಯುತ್ ಸಂಪರ್ಕ ಪಡೆಯಲು ಎಷ್ಟೇ ಕಷ್ಟಪಟ್ಟರೂ ಕೆಲವು ದಾಖಲೆಗಳ ಅಲಭ್ಯತೆಯಿಂದಾಗಿ ವಿದ್ಯುತ್ ಸಂಪರ್ಕ ಪಡೆಯುವುದು ಸಾಧ್ಯವಾಗಿರಲೇ ಇಲ್ಲ.

ಗುಲಾಬಿ ಮತ್ತು ಅವರ ಪತಿ ದಿನಗೂಲಿ ಕಾರ್ಮಿಕರು. ಮಕ್ಕಳಿಗೆ ಅತ್ಯುತ್ತಮ ವಿದ್ಯಾಭ್ಯಾಸ ಕೊಡಿಸಬೇಕು ಅನ್ನುವುದು ಅವರ ಜೀವನದ ದೊಡ್ಡ ಆಸೆ. ಆ ಇಬ್ಬರು ಮಕ್ಕಳು ಮೇಣದ ಬತ್ತಿ ಅಥವಾ ಸೀಮೆ ಎಣ್ಣೆ ಬುಡ್ಡಿ ದೀಪದ ಬೆಳಕಲ್ಲಿ ಕಷ್ಟ ಪಟ್ಟು ವಿದ್ಯಾಭ್ಯಾಸ ನಡೆಸುತ್ತಿದ್ದರು.

ಗುಲಾಬಿಯವರ ಕುಟುಂಬದ ಕಷ್ಟ ಸೆಲ್ಕೋ ಸಂಸ್ಥೆ ಗಮನಕ್ಕೆ ಬಂತು. ಆ ಕುಟುಂಬದ ಅಸಹಾಯಕತೆಯನ್ನು ಗಮನಿಸಿ ಅವರ ಮನೆಗೆ ಉಚಿತ ಸೌರ ವಿದ್ಯುತ್ ಸಂಪರ್ಕ ನೀಡುವ ನಿರ್ಧಾರ ಮಾಡಿತು. ಈಗ ಸೌರ ವಿದ್ಯುತ್ ಸಂಪರ್ಕವನ್ನು ನೀಡುವ ಕೆಲಸ ಕೂಡ ಮುಗಿದಿದೆ. ಇಡೀ ಕುಟುಂಬ ಖುಷಿಯಾಗಿದೆ. ದೀಪ ಒದಗಿಸಿದ್ದಕ್ಕೆ ಸೆಲ್ಕೋ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದೆ. ಅವರ ಖುಷಿಯ ಪಾಲು ಇಡೀ ಸೆಲ್ಕೋ ಬಳಗಕ್ಕೆ ಸಲ್ಲುತ್ತದೆ.

ಸೆಲ್ಕೋ ಪ್ರತಿನಿಧಿಯೊಂದಿಗೆ ಮಾತನಾಡುತ್ತಾ ಗುಲಾಬಿಯವರು ಹೇಳಿದ ಮಾತುಗಳಿವು: ಎಂಟು ತಿಂಗಳ ಹಿಂದೆ ನಾವು ಈ ಮನೆಗೆ ಬಂದೆವು. ಎಷ್ಟೇ ಕಷ್ಟ ಪಟ್ಟರೂ ವಿದ್ಯುತ್ ಸಂಪರ್ಕ ಸಿಗಲಿಲ್ಲ. ನಮಗೆ ಇಬ್ಬರು ಹೆಣ್ಣು ಮಕ್ಕಳು. ದೊಡ್ಡವಳು ಎಸ್‌ಎಸ್‌ಎಲ್‌ಸಿ ಓದುತ್ತಿದ್ದಾಳೆ. ಚಿಕ್ಕವಳು ಏಳನೇ ತರಗತಿ. ರಾತ್ರಿ ಹೊತ್ತು ಅವರಿಗೆ ಸೀಮೆಎಣ್ಣೆ ದೀಪದ ಬುಡ್ಡಿಯಲ್ಲಿ ಅಥವಾ ಮೇಣದ ಬತ್ತಿ ಬೆಳಕಲ್ಲಿ ವಿದ್ಯಾಭ್ಯಾಸ ನಡೆಸುವುದು ನಿಜಕ್ಕೂ ಕಷ್ಟವಾಗುತ್ತಿತ್ತು. ಬಹುಶಃ ಈಗ ದೇವರೇ ಕರುಣೆ ತೋರಿಸಿದ್ದಾರೆ ಅನ್ನಿಸುತ್ತದೆ. ಮಕ್ಕಳು ಸೌರ ದೀಪದ ಬೆಳಕಲ್ಲಿ ಓದುತ್ತಾರೆ. ಅದಕ್ಕಾಗಿ ನಾನು ಸೌರಶಕ್ತಿ ದೀಪದ ಸೌಲಭ್ಯ ಒದಗಿಸಿದೆ ಸೆಲ್ಕೋ ಸಂಸ್ಥೆಗೆ ಯಾವತ್ತೂ ಋಣಿಯಾಗಿರುತ್ತೇನೆ.

ಈ ಕುಟುಂಬದ ಖುಷಿ ಹೆಚ್ಚಾಗಲಿ ಅನ್ನುದೇ ನಮ್ಮ ಆಶಯ.



# ಕೋವಿಡ್ ಸಂದರ್ಭದ ಜೀವನ ಪ್ರೀತಿ ಕತೆಗಳು

## ಸೌರಶಕ್ತಿಯಿಂದ ಸ್ಫೂರ್ತಿದಾಯಕ ಜೀವನ ಕಟ್ಟಿಕೊಂಡವರು

**ಕೋವಿಡ್ ಸಾಂಕ್ರಾಮಿಕ ಸೋಂಕಿನಿಂದಾಗಿ ಭಾರತದ ನಿರುದ್ಯೋಗ ಪ್ರಮಾಣ ಕಳೆದ ವರ್ಷ ಲಾಕ್‌ಡೌನ್ ಆರಂಭವಾದಾಗಿನಿಂದ ಶೇ.27.1ಕ್ಕೆ ಏರಿದೆ. ಒಂದು ಅಧ್ಯಯನದ ಪ್ರಕಾರ ಭಾರತದಾದ್ಯಂತ ಕೋವಿಡ್‌ನಿಂದಾಗಿ 12.2 ಕೋಟಿ ಮಂದಿ ಕೆಲಸವನ್ನು ಕಳೆದುಕೊಂಡಿದ್ದಾರೆ. ಇಂಥಾ ನೋವಿನ ಸಂಗತಿಗಳ ಮಧ್ಯೆ ಖುಷಿ ಕೊಡುವ ವಿಚಾರಗಳೂ ಇವೆ. ಕೋವಿಡ್ ಸೋಂಕಿನ ಸಂದರ್ಭದಲ್ಲಿ ಬಹುತೇಕರು ಸೌರ ಶಕ್ತಿ ಆಧರಿತ ಜೀವನೋಪಾಯ ಸಾಧನಗಳನ್ನು ಬಳಸಿಕೊಂಡು ಸುಸ್ಥಿರ ಆದಾಯವನ್ನು ಗಳಿಸುತ್ತಿದ್ದಾರೆ. ಆ ಮೂಲಕ ಈ ಕಷ್ಟದ ಸಮಯದಲ್ಲಿ ಕುಟುಂಬವನ್ನು ಚೆನ್ನಾಗಿ ನೋಡಿಕೊಂಡು ನೆಮ್ಮದಿ ಜೀವನ ಸಾಗಿಸುತ್ತಿದ್ದಾರೆ. ಅಂಥಾ ಮೂವರ ಮಾದರಿ ಕತೆ ಇಲ್ಲಿದೆ.**



## ರುಕ್ಮಿಣಿ

ರುಕ್ಮಿಣಿಯವರು ಸೌರಶಕ್ತಿ ಆಧರಿತ ಹೊಲಿಗೆ ಯಂತ್ರದ ಮೂಲಕ ಟೈಲರಿಂಗ್ ಕೆಲಸ ಮಾಡುತ್ತಾರೆ. ಅವರ ಪತಿ ದಿನಗೂಲಿ ಕೆಲಸಕ್ಕೆ ಹೋಗುತ್ತಾರೆ. ಕೋವಿಡ್‌ನಿಂದಾಗಿ ಪತಿ ಕೆಲಸ ಕಳೆದುಕೊಂಡರು. ಆದರೆ ತಮಗೆ ಅಷ್ಟೇನೂ ತೊಂದರೆಯಾಗಲಿಲ್ಲ ಎನ್ನುತ್ತಾರೆ ರುಕ್ಮಿಣಿ. ಆರಂಭದಲ್ಲಿಯೇ ರುಕ್ಮಿಣಿ ಸೌರಶಕ್ತಿ ತಂತ್ರಜ್ಞಾನವನ್ನು ನಂಬಿ ಅದನ್ನು ಪರಿಣಾಮಕಾರಿಯಾಗಿ ಬಳಸಿದರು. ಅದರಿಂದಾಗಿ ಸುಸ್ಥಿರ ಮತ್ತು ಪರಿಸರ ಸ್ನೇಹಿ ಜವಾಬ್ದಾರಿಯುತ ಜೀವನ ನಡೆಸತೊಡಗಿದರು. ಕೋವಿಡ್ ಸಂದರ್ಭದಲ್ಲಿ ನೆರೆಹೊರೆ ಮತ್ತು ಸಿರಿ ಉತ್ಪನ್ನ ಸಂಸ್ಥೆಯಿಂದ ಟೈಲರಿಂಗ್ ಕೆಲಸವನ್ನು ಪಡೆದು ದುಡಿದರು. ಹೀಗಾಗಿ ಪತಿಗೆ ಕೆಲಸ ಇಲ್ಲದಿದ್ದರೂ ಆರ್ಥಿಕ ಕಷ್ಟ ಉಂಟಾಗಲಿಲ್ಲ. ಅದರ ಬದಲಾಗಿ ಆದಾಯ ಹೆಚ್ಚಿತು ಕೂಡ. ಲಾಕ್‌ಡೌನ್ ಸಂದರ್ಭದಲ್ಲಿ ಕುಟುಂಬಕ್ಕೆ ಯಾವುದೇ ತೊಂದರೆಯಾಗದಂತೆ ನೋಡಿಕೊಂಡಿದ್ದಕ್ಕೆ ಅವರಿಗೆ ಖುಷಿ ಮತ್ತು ಹೆಮ್ಮೆ ಎರಡೂ ಇದೆ. ಇಂಥಾ ಸಾಧಕಿಯರ ಸಂಖ್ಯೆ ಹೆಚ್ಚಾಗಬೇಕು.



## ರವೀಶ್

ರವೀಶ್ ಬೆಂಗಳೂರಿನಲ್ಲಿ ಐಟಿ ಉದ್ಯೋಗಿಯಾಗಿದ್ದವರು. ಕೋವಿಡ್ ಕಾರಣಕ್ಕೆ ಕೆಲಸ ಕಳೆದುಕೊಂಡು ಕೊಪ್ಪದಲ್ಲಿರುವ ತಮ್ಮ ಹಳ್ಳಿಗೆ ಅವರು ಅನಿವಾರ್ಯವಾಗಿ ಹೋಗಬೇಕಾಯಿತು. ಅಲ್ಲಿಗೆ ಹೋಗಿ ಅವರು ತಮ್ಮ ಊರಿನಲ್ಲಿ ಯಾವುದೇ ಮೊಬೈಲ್ ಅಂಗಡಿ ಇಲ್ಲದ್ದನ್ನು ನೋಡಿ ಸಣ್ಣದೊಂದು ಮೊಬೈಲ್ ಅಂಗಡಿ ಆರಂಭಿಸಿದರು. ನಂತರ ಅವರಿಗೆ ತಮ್ಮ ಹಳ್ಳಿಯ ಸುತ್ತಮುತ್ತ 3–4 ಕಿಮೀ ಅಂತರದಲ್ಲಿ ಯಾವುದೇ ಕ್ಸೆರಾಕ್ಸ್ ಅಂಗಡಿ ಇಲ್ಲದಿರುವುದು ಹೊಳೆಯಿತು. ಅದರಿಂದಾಗಿ ಅವರು ತಕ್ಷಣ ಸೆಲ್ಕೋದ ಸೌರಶಕ್ತಿ ಆಧರಿತ ಫೋಟೋಕಾಪಿ ಯಂತ್ರವನ್ನು ತಮ್ಮ ಅಂಗಡಿಯಲ್ಲಿ ಅಳವಡಿಸಿಕೊಂಡರು.

ಒಂದು ಹಂತದಲ್ಲಿ ಬೇಸರದಲ್ಲಿದ್ದ ಅವರು ಈಗ ಉತ್ತಮ ಆದಾಯ ಗಳಿಕೆಯಿಂದಾಗಿ ಖುಷಿಯಲ್ಲಿದ್ದಾರೆ. ಹಳ್ಳಿಯಲ್ಲಿರುವುದು ಸಂತೋಷದಾಯಕ ಎನ್ನುತ್ತಾರೆ. ಲಾಕ್‌ಡೌನ್‌ನಲ್ಲಿಯೂ ಉತ್ತಮ ಆದಾಯ ಗಳಿಸಿ, ಅದರಲ್ಲಿ ಸ್ವಲ್ಪ ಉಳಿತಾಯ ಮಾಡಲು ಸಾಧ್ಯವಾಗುತ್ತಿರುವುದಕ್ಕೆ ಅವರಿಗೆ ಆನಂದವಿದೆ.

## ಶಿವಮ್ಮ

ಶಿವಮ್ಮನವರ ಹಳ್ಳಿಯ ಜನ ಹಿಟ್ಟಿನ ಗಿರಣಿಗೆ ಹೋಗಬೇಕಾದರೆ ಸುಮಾರು 50 ಕಿಮೀ ಪ್ರಯಾಣ ಮಾಡಬೇಕಿತ್ತು. ಹಳ್ಳಿಯವರ ಸಮಸ್ಯೆಗೆ ಪರಿಹಾರ ಕಾಣಲು ಮತ್ತು ತಮ್ಮ ಜೀವನ ನಡೆಸಲು ಶಿವಮ್ಮ ತಮ್ಮ ಹಳ್ಳಿಯಲ್ಲಿ ಸೌರಶಕ್ತಿ ಆಧರಿತ ಹಿಟ್ಟಿನ ಗಿರಣಿ ಆರಂಭಿಸಿದರು. ಆ ಗಿರಣಿ ಈಗ ಅವರ ಜೀವನಾಧಾರವಾಗಿದೆ.

ಹಳ್ಳಿಯವರ ಸಮಸ್ಯೆ ಪರಿಹರಿಸಿದ್ದಲ್ಲದೆ, ಶಿವಮ್ಮನವರ ಕುಟುಂಬ ನಿರ್ವಹಣೆ ಆ ಗಿರಣಿಯಿಂದ ನಡೆಯುತ್ತದೆ. ಶಿವಮ್ಮನವರ ಪತಿ ಕೋವಿಡ್‌ನಿಂದಾಗಿ ತಮ್ಮ ಕೆಲಸ ಕಳೆದುಕೊಂಡಿದ್ದರು. ಆದರೆ ಶಿವಮ್ಮನವರ ದುಡಿಮೆಯಿಂದಾಗಿ ಕುಟುಂಬಕ್ಕೆ ಕಷ್ಟ ಎದುರಾಗಲಿಲ್ಲ. ಈಗಾಗಲೇ ಶಿವಮ್ಮ ಯಂತ್ರ ಖರೀದಿಸಲು ಪಡೆದಿದ್ದ ಸಾಲ ತೀರಿಸಿದ್ದಾರೆ. ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.



# ಪಾರಂಪರಿಕ ಕೌಶಲವನ್ನು ಮುಂದಿನ ಪೀಳಿಗೆಗೆ ದಾಟಿಸಿದ ಸೌರಶಕ್ತಿ

## ರಾಮಚಂದ್ರ ಗುನಗಾ ಎಂಬ ಹಿರಿಯ ಜೀವದ ಹುಮ್ಮಸ್ಸಿನ ಕತೆ


ಮೊದಲು


ನಂತರ

ಕುಂಬಾರಿಕೆ ಅತಿ ಪುರಾತನ ಜೀವನೋಪಾಯ ಕೌಶಲಗಳಲ್ಲಿ ಒಂದು. ಒಂದು ಜನಾಂಗದಿಂದ ಮತ್ತೊಂದು ಜನಾಂಗಕ್ಕೆ ದಾಟುತ್ತಲೇ ಬಂದ ಪಾರಂಪರಿಕ ಕಸುಬು ಅದು. ಅದೇ ಥರ ತಮ್ಮ ಹಿರಿಯರಿಂದ ಕುಂಬಾರಿಕೆ ಕಲಿತವರು ರಾಮಚಂದ್ರ ಗುನಗಾ. ಅವರಿಗೆ 68 ವರ್ಷ ವಯಸ್ಸು. ಕುಂಬಾರಿಕೆ ಅವರ ವೃತ್ತಿ. ಯಕ್ಷಗಾನ ಪ್ರವೃತ್ತಿ. ಉತ್ತರ ಕನ್ನಡದ ಕುಮಟಾ ತಾಲೂಕಿನ ಹಾಲ್ಕರ್ ಅವರ ಊರು.

ದುರದೃಷ್ಟವೆಂದರೆ 30 ವರ್ಷಗಳ ಹಿಂದೆಯೇ ಅವರು ದೃಷ್ಟಿ ಕಳೆದುಕೊಂಡಿದ್ದರು. ಆದರೂ ಕುಂಬಾರಿಕೆಯನ್ನು ಮುಂದುವರೆಸಿಕೊಂಡು ಬಂದಿದ್ದರು. ಹಿರಿಯರಿಂದ ಬಂದ ತಾವೇ ತಿರುಗಿಸಬೇಕಿದ್ದ ಕುಂಬಾರಿಕೆ ಚಕ್ರವನ್ನು ಬಳಸಿಕೊಂಡು ಅವರು ನಾನಾ ಬಗೆಯ ಮಣ್ಣಿನ ಪಾತ್ರೆಗಳನ್ನು ತಯಾರಿಸುತ್ತಿದ್ದರು. ಮಡಕೆ, ಮಗ್ ಇತ್ಯಾದಿಗಳನ್ನು ಪತ್ನಿ ಸಹಾಯದಿಂದ ಸಿದ್ಧಗೊಳಿಸುತ್ತಿದ್ದರು. ಈ ಹಂತದಲ್ಲಿ ಕುಂಬಾರಿಕೆ ಚಕ್ರವನ್ನು ಗಂಟೆಗಟ್ಟಲೆ ತಿರುಗಿಸಬೇಕಾಗುತ್ತಿತ್ತು. ಅದಕ್ಕೆ ಹೆಚ್ಚು ಸಮಯ ಮತ್ತು ಜಾಸ್ತಿ ಶ್ರಮ ಎರಡೂ ಬೇಕಾಗುತ್ತಿತ್ತು. ಅಲ್ಲದೇ ಅವರಿಗೆ ಮಣ್ಣು ಕಲಸಿ, ಅದಕ್ಕೊಂದು ರೂಪ ಕೊಟ್ಟು ಬೆಂಕಿಯಲ್ಲಿ ಸುಡುವುದು ಅವರಿಗೆ ತ್ರಾಸದಾಯಕವಾಗಿತ್ತು. ಅವರಿಗೆ ಒಂದು ಹಂತದಲ್ಲಿ ಸೆಲ್ಕೋದ ಸೋಲಾರ್ ಆಧರಿತ ಕುಂಬಾರಿಕೆ ಯಂತ್ರದ ಬಗ್ಗೆ ಮಾಹಿತಿ ತಿಳಿಯಿತು. ಸೆಲ್ಕೋ ಫೌಂಡೇಷನ್ ನೆರವಿನಿಂದ ಅದನ್ನು ಖರೀದಿಸಿ ಬಳಸತೊಡಗಿದ ಮೇಲೆ ಚಕ್ರ ತಿರುಗಿಸುವ ಕೆಲಸ ಇಲ್ಲವಾಯಿತು. ಅವರ ಪತ್ನಿಗೂ ಕೆಲಸ ಸುಲಭವಾಯಿತು.

ಕೆಲಸ ಸುಲಭವಾಗಿದ್ದು ನೋಡಿ ಈ ಕಸುಬಿನ ಮೇಲೆ ಅವರ ಮಗನಿಗೂ ಆಸಕ್ತಿ ಹೆಚ್ಚಿತು. ಮೊದಲು ಅವರು ತಿಂಗಳಿಗೆ ರೂ.200ರಿಂದ ರೂ.300 ಗಳಿಸುತ್ತಿದ್ದರು. ಸೆಲ್ಕೋ ಸೋಲಾರ್ ಕುಂಬಾರಿಕೆ ಯಂತ್ರ ಬಂದ ಮೇಲೆ ಕೆಲಸ ವೇಗವಾಗಿ, ಹೆಚ್ಚಾಗಿ ನಡೆದು ತಿಂಗಳಿಗೆ ರೂ.5000ದಿಂದ ರೂ.6000 ಆದಾಯ ಗಳಿಸತೊಡಗಿದರು. ಈಗ ರಾಮಚಂದ್ರ ಗುನಗಾ, "ಸೌರಶಕ್ತಿ ಆಧರಿತ ಕುಂಬಾರಿಕೆ ಚಕ್ರದಿಂದ ಕಷ್ಟಗಳನ್ನು ದೂರ ಮಾಡಿ ನಮ್ಮ ಕೆಲಸವನ್ನು ವೇಗ ಮಾಡಿದ್ದಲ್ಲದೇ ಆದಾಯವನ್ನೂ ಹೆಚ್ಚಿಸಿದೆ" ಎನ್ನುತ್ತಾರೆ.

ಸೆಲ್ಕೋ ಹೇಗೆ ಜೀವನ ಬದಲಿಸುತ್ತದೆ ಅನ್ನುವುದಕ್ಕೆ ಇದೊಂದು ಕತೆ ಸಾಕ್ಷಿ.









# ಸೆಲ್ಕೋ ಅಂದ್ರೆ ನನಗೆ ಆಶೀರ್ವಾದ

ನನ್ನ ಪಾಲಿಗೆ ಸೆಲ್ಕೋ ಅನ್ನುವುದು ಆಶೀರ್ವಾದ ಇದ್ದಂತೆ. ನಾನು ಇಂಟ್ರೋವರ್ಟ್. ಮಾತನಾಡಲು ಹಿಂಜರಿಯುತ್ತಿದ್ದೆ. ಹೊರಗೆ ಹೋಗಿ ಕೆಲಸ ಮಾಡಲು ಅಂಜುತ್ತಿದ್ದೆ. ಕೆಲಸ ಮಾಡುವ ಜಾಗದಲ್ಲಿ ಮಹಿಳೆಯರು ತುಂಬಾ ತೊಂದರೆ ಅನುಭವಿಸುತ್ತಾರೆ ಎಂಬ ಕತೆಗಳನ್ನು ಕೇಳಿ ಮತ್ತಷ್ಟು ಕುಗ್ಗಿ ಹೋಗಿದ್ದೆ.

ಜೀವನದ ಯಾವುದೋ ಒಂದು ಹಂತದಲ್ಲಿ ನಾನು ಸೆಲ್ಕೋ ಸಂಸ್ಥೆಯನ್ನು ಸೇರಿದೆ. ಅಂದಿನಿಂದ ಇಂದಿನವರೆಗೂ ನಾನು ಸೆಲ್ಕೋ ಕುಟುಂಬದ ಸದಸ್ಯಳು ಅಂತ ಹೇಳುವುದಕ್ಕೆ ಹೆಮ್ಮೆ ಪಡುತ್ತೇನೆ. ಪುರುಷರು ಮತ್ತು ಮಹಿಳೆಯರು ಎಂಬ ಯಾವ ಭೇದ ಭಾವವನ್ನೂ ಮಾಡದ ಏಕೈಕ ಸಂಸ್ಥೆ ಸೆಲ್ಕೋ ಅಂತ ನನಗನ್ನಿಸುತ್ತದೆ. ಬಹಳಷ್ಟು ಮಂದಿ ಮಹಿಳಾ ಸಬಲೀಕರಣದ ಕುರಿತು ಮಾತನಾಡುತ್ತಾರೆ ಹೊರತು ಆ ನಿಟ್ಟಿನಲ್ಲಿ ಕೆಲಸ ಮಾಡುವುದಿಲ್ಲ. ಆದರೆ ಸೆಲ್ಕೋ ಮಹಿಳೆಯರನ್ನು ಸಬಲರನ್ನಾಗಿ ಮಾಡುವುದಲ್ಲದೆ ಸರ್ವ ಸ್ವತಂತ್ರವಾಗಿ ಬದುಕುವುದನ್ನು ಕಲಿಸಿಕೊಡುತ್ತದೆ.

ನನಗೆ ಸಮಾಜಕ್ಕೆ ಒಳ್ಳೆಯದಾಗುವ ಕೆಲಸ ಮಾಡಲು ತುಂಬಾ ಆಸೆ ಇತ್ತು. ಆ ಆಸೆ ಸೆಲ್ಕೋದಿಂದಾಗಿ ಪೂರೈಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ ಇಲ್ಲದ ಮನೆಗಳಿಗೆ ದೀಪದ ಬೆಳಕು ಒದಗಿಸುವುದರಿಂದ ಹಿಡಿದು ಜೀವನೋಪಾಯ ಸಾಧನಗಳನ್ನು ಒದಗಿಸಿ ಜೀವನ ಬದಲಿಸುವವರೆಗೆ ಅತ್ಯುತ್ತಮ ಕೆಲಸಗಳನ್ನು ಸೆಲ್ಕೋ ಮಾಡುತ್ತದೆ. ಮಹಿಳೆಯರು ಅಡುಗೆ ಮನೆಗಷ್ಟೇ ಸೀಮಿತವಾದವರಲ್ಲ, ಪುರುಷರ ಸಮಾನವಾಗಿ ಕೆಲಸವನ್ನು ಮಾಡಬಲ್ಲರು ಅನ್ನುವುದನ್ನು ಸೆಲ್ಕೋ ಸಂಸ್ಥೆ ದೃಢವಾಗಿ ನಂಬಿದೆ. ಸಮಾಜಕ್ಕೆ ನೆರವು ನೀಡುವುದಲ್ಲದೆ ನಿರುದ್ಯೋಗಿಯಾಗಿದ್ದ ನನ್ನಂತಹ ಹಲವಾರು ಮಂದಿಗೆ ಉದ್ಯೋಗಾವಕಾಶ ನೀಡಿ ಪೊರೆದಿದೆ. ಹಾಗಾಗಿಯೇ ಸೆಲ್ಕೋ ಸಂಸ್ಥೆ ನಮ್ಮ ಶಕ್ತಿ ಅಂತ ಹೇಳಲು ಹೆಮ್ಮೆ ಪಡುತ್ತೇನೆ.

**– ಜ್ಯೋತಿ ಚಕ್ರಬೋರ್ತಿ**
**ಕಚೇರಿ ಆಡಳಿತಗಾರ್ತಿ**
**ಸೆಲ್ಕೋ ಕಲಬುರಗಿ ಶಾಖೆ**

**SELCO SOLAR LIGHT PVT.LTD.**
# 690, 15th Cross, 2nd Phase, J.P.Nagar, Bengaluru - 560078
Phone: 080- 26493144. networkingteam@selco-india.com